ಕರ್ನಾಟಕ ಸರ್ಕಾರ
(ಸಾರಿಗೆ ಇಲಾಖೆ)

ಸಂಖ್ಯೆ: ಸಾಆ/ಅಪ್ತ ಶಾಖೆ/2019-20

ಸಾರಿಗೆ ಮತ್ತು ರಸ್ತೆ ಸುರಕ್ಷತೆ
ಆಯುಕ್ತರ ಕಛೇರಿ, 1ನೇ ಮಹಡಿ,
ಬಿ.ಎಂ.ಟಿ.ಸಿ. ಸಂಕೀರ್ಣ, ಕೆ.ಹೆಚ್. ರಸ್ತೆ,
ಶಾಂತಿನಗರ, ಬೆಂಗಳೂರು-27,
ದಿನಾಂಕ: 18-03-2020.

## "ಸುತ್ತೋಲೆ"

ವಿಷಯ : ಕರೋನಾ ವೈರಸ್ ಹರಡುವುದನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಾರಿಗೆ ಇಲಾಖೆಯ ಕಛೇರಿಗಳಿಗೆ ಪ್ರತಿ ದಿನ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಬೇರೆ ಬೇರೆ ಕೆಲಸಗಳಿಗಾಗಿ ಬರುತ್ತಿದ್ದು ಅವರುಗಳಿಂದ ಕರೋನಾ ವೈರಸ್ ಹರಡದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವುದು ಅವಶ್ಯಕವಾಗಿರುತ್ತದೆ. ಆದುದರಿಂದ ಎಲ್ಲಾ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ/ ಪ್ರಾದೇಶಿಕ/ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಲ್ಲಿ ಈ ಕೆಳಗಿನ ಕ್ರಮಗಳನ್ನು ಕಟ್ಟುನಿಟ್ಟಾಗಿ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

1) ಕಛೇರಿಗಳಿಗೆ ಬರುವ ಸಾರ್ವಜನಿಕರು ಗುಂಪು ಕಟ್ಟಿ ನಿಲ್ಲುವುದನ್ನು ಪ್ರತಿಬಂಧಿಸುವುದು.
2) ಕಲಿಕಾ ಮತ್ತು ಚಾಲನಾ ಲೈಸೆನ್ಸ್ ಪಡೆಯಲು ಬರುವ ಅಭ್ಯರ್ಥಿಗಳು ಅವರಿಗೆ ನೀಡಲಾದ ಸಮಯದಲ್ಲಿಯೇ (Slot) ಬರುವಂತೆ ಸೂಚಿಸುವುದು.
3) ಕಲಿಕಾ ಮತ್ತು ಚಾಲನಾ ಪರವಾನಗಿ ಪಡೆಯಲು ಬರುವ ಅಭ್ಯರ್ಥಿಗಳು ಪರೀಕ್ಷೆ ನೀಡುವ ಮುನ್ನ ಮತ್ತು ನಂತರ ಅವರ ಕೈಗಳನ್ನು ಸ್ಯಾನಿಟೈಸರ್‌ನಿಂದ ಸ್ವಚ್ಛಪಡಿಸಿಕೊಳ್ಳುವುದನ್ನು ಖಾತರಿಪಡಿಸಿಕೊಳ್ಳುವುದು.
4) ಕಲಿಕಾ ತರಬೇತಿಗೆ ಬಳಸುವ ಕೊಠಡಿಯನ್ನು ಪರೀಕ್ಷೆ ಆರಂಭಿಸುವ ಮುನ್ನ ಸ್ವಚ್ಛಗೊಳಿಸುವುದು (fumigation) ಹಾಗೂ ಚಾಲನಾ ಪರೀಕ್ಷೆ ನೀಡಲು ಒಂದೇ ವಾಹನವನ್ನು ಹಲವು ಮಂದಿ ಬಳಸುವುದಾದರೆ ವಾಹನವನ್ನು ಸೂಕ್ತ ರೀತಿಯಲ್ಲಿ ಸ್ವಚ್ಛಗೊಳಿಸುವುದನ್ನು ಖಾತರಿಪಡಿಸಿಕೊಳ್ಳುವುದು. ಹಾಗೆಯೇ ಅಭ್ಯರ್ಥಿಗಳು ತಮ್ಮ ಕೈಗಳನ್ನು ಪರೀಕ್ಷೆಗೆ ಮುನ್ನ ಹಾಗೂ ನಂತರ ಸ್ಯಾನಿಟೈಸರ್‌ನಿಂದ ಸ್ವಚ್ಛಗೊಳಿಸಿಕೊಳ್ಳಲು ಸೂಚಿಸುವುದು.
5) ಎಲ್ಲಾ ಕಛೇರಿಗಳ ಮುಂದೆ ಕರೋನಾ ವೈರಸ್ ಬಗ್ಗೆ ಎಚ್ಚರಿಕೆ ನೀಡುವ ಫಲಕಗಳನ್ನು ಪ್ರದರ್ಶಿಸುವುದು.
6) ಸ್ಥಳೀಯ ಆರೋಗ್ಯಾಧಿಕಾರಿಗಳೊಂದಿಗೆ ಚರ್ಚಿಸಿ ಅವಶ್ಯವಿದ್ದಲ್ಲಿ ಹೆಚ್ಚಿನ ಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳುವುದು.

ಮೇಲ್ಕಂಡ ಕ್ರಮಗಳನ್ನು ತೆಗೆದುಕೊಳ್ಳಲು ಅವಶ್ಯವಾದ ಸಾಮಗ್ರಿಗಳನ್ನು ಸ್ಥಳೀಯವಾಗಿಯೆ ಎಲ್ಲಾ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ/ ಪ್ರಾದೇಶಿಕ/ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ವಿತ್ತೀಯ ಅಧಿಕಾರದಡಿ ಖರೀದಿಸಬಹುದಾಗಿದೆ ಹಾಗೂ ಸ್ಥಳೀಯ ಆರೋಗ್ಯಾಧಿಕಾರಿಗಳ ಮೂಲಕ ಪಡೆದುಕೊಳ್ಳಬಹುದಾಗಿದೆ.

ಮೇಲ್ಕಂಡ ಕ್ರಮಗಳನ್ನು ಚಾಚೂ ತಪ್ಪದೇ ಈಗಿನಿಂದಲೇ ಪ್ರಾರಂಭಿಸುವಂತೆ ಹಾಗೂ ಮುಂದಿನ ಸೂಚನೆಯವರೆಗೆ ಜಾರಿಯಲ್ಲಿಡುವಂತೆ ನಿರ್ದೇಶಿಸಿದೆ.

18/03

ಆಯುಕ್ತರು,
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.

**ಪ್ರತಿಗಳು:**

1) ರಾಜ್ಯದ ಎಲ್ಲಾ ಅಪರ / ಜಂಟಿ ಸಾರಿಗೆ ಆಯುಕ್ತರುಗಳು / ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ/ ಪ್ರಾದೇಶಿಕ/ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ (ತನಿಖಾ ಠಾಣೆಗಳು ಸೇರಿದಂತೆ) ಮಾಹಿತಿ ಹಾಗೂ ಸೂಕ್ತ ತುರ್ತು ಕ್ರಮಕ್ಕಾಗಿ.
2) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ನೀಡಲಾಗಿದೆ.
3) ಕಛೇರಿ ಪ್ರತಿ.